doc-556
T. P-2

Reg No B G 155 6 — 10 —72

In The State First Golden Jubilee Celebrated Paper 'Satyavadi' daily, Mysore 4

56th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸೇರಿಸಿದ ಪತ್ರಿಕೆ

ಸ್ಥಾಪಕರು: ಅರ್ಥಮನೆ ಸರ್ದಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [8 ಪುಸ

ಬಾಡಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯವರಿಂದ ಕ್ರಮ

ಭ್ರಷ್ಟಾಚಾರ

ನವದೆಹಲಿ— ಕೇಂದ್ರ ತನಿಖಾ ಸಂಸ್ಥೆಯವರ (ಸಿಬಿಐ) 1972 ಆಗಸ್ಟ್ ತಿಂಗಳಲ್ಲಿ ಭ್ರಷ್ಟಾಚಾರ ದುರ್ವರ್ತನೆ ಹಾಗೂ ವಂಚನೆಯ ಆರೋಪಗಳಿಗಾಗಿ 27 ಮಂದಿ ಸರ್ಕಾರಿ ಉದ್ಯೋಗಿಗಳು ಹಾಗೂ 69 ಮಂದಿ ಖಾಸಗಿ ವ್ಯಕ್ತಿಗಳನ್ನು ಶಿಕ್ಷೆಗೆ ಗುರಿಪಡಿಸಿದ್ದರು.

★

ಅರ್ಥಮನೆ ನೌಕರರು

ಮೈಸೂರು— ಅರಮನೆ ನೌಕರರ ಚಳವಳಿ ಮುಂದುವರಿಯುತ್ತಿದ್ದು ಇಬ್ಬರು ಅನ್ನಸತ್ಯಾಗ್ರಹ ಪ್ರಾರಂಭಿಸಿದ್ದಾರೆ.

★

ದಸರಾ ಸಾಂಸ್ಕೃತಿಕ ಮತ್ತು ಚಲನ ಚಿತ್ರೋತ್ಸವ

ದಸರಾ ಸಾಂಸ್ಕೃತಿಕ ಮತ್ತು ಚಲನ ಚಿತ್ರೋತ್ಸವವನ್ನು ವೈಭವವಾಗಿ ನಿರ್ವಹಿಸುವ ವಿಷಯವನ್ನು ಈ ಸಂಬಂಧದ ಉಪ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಕೆ. ಮೂರ್ತಿಯವರು ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಇವೆಲ್ಲವನ್ನೂ ರೂ. 2,62,000 ಲಕ್ಷ ಕ್ಕಿಂತ ಕಡಿಮೆಯಲ್ಲಿ ಮುಗಿಸಲು ಸಾಧ್ಯವಿದ್ದು, ಶೇಕಡ 80 ಪ್ರೇಕ್ಷಕರು ಬರಬಹುದೆಂದು ಹೇಳಿದರು. ತಾ|| 8 ರಿಂದ ಕ್ರಾಫರ್ಡ್ ಹಾಲ್, ಜೀವಣ್ಣರಾಯನ ಕಟ್ಟೆ, ವಸ್ತುಪ್ರದರ್ಶನಗಳಲ್ಲಿ ನಡೆಯುವ 26 ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮೈಸೂರಿನವರಿಗೇ ಹೆಚ್ಚು ಅವಕಾಶ ನೀಡಲಾಗಿದ್ದು ಅವರಿಗೆ 14 ಕೂಡಲಾಗಿದೆ; ದಸರವನ್ನು ಹೆಚ್ಚು ಆಕರ್ಷಣೀಯಗೊಳಿಸಲು ನೆರೆ ರಾಜ್ಯದ ಹೆಸರಾಂತ ಕಲಾವಿದರನ್ನು ಬರಮಾಡಿಕೊಳ್ಳಲಾಗಿದೆಯೆಂದು ತಿಳಿಸಿ ಎಲ್ಲವನ್ನೂ ವಿವರಿಸಿದರು.

ಚಲನಚಿತ್ರೋತ್ಸವವನ್ನು 1 ವಾರ 7 ಚಿತ್ರಮಂದಿರಗಳಲ್ಲಿ ನಡೆಸಲಾಗುವುದೆಂದು ಹೇಳಿದರು

ದುಬಾರಿ ಬಾಡಿಗೆ

ಮೈಸೂರು— ವಸತಿಗಳಲ್ಲಿ ದುಬಾರಿ ಬಾಡಿಗೆ ತೆಗೆದುಕೊಳ್ಳಲಾಗುತ್ತಿದೆ ಎಂಬ ವಿದ್ಯಾರ್ಥಿಗಳ ಆಪಾದನೆ ಬಗ್ಗೆ ಜಿಲ್ಲಾಧಿಕಾರಿಗಳು ಅರ್ಜಿಹಾಕಲು ತಿಳಿಸಿದ್ದಾರೆ — ವಸತಿ ಮಾಲೀಕರೂ ಅರ್ಜಿ ಹಾಕಲು ತಿಳಿಸಲಾಗಿದೆ — ಬಾಡಿಗೆ ನಿಯಂತ್ರಣ ರೀತಿ ಇವು ಪರ್ಯಾಲೋಚನೆಗೊಳ್ಳಲಾಗುವುವು.

★

ವಿದೇಶಿ ಮದ್ಯ ವಶ

ಬೊಂಬಾಯಿ— ರೂ 1.87 ಲಕ್ಷ ಬೆಲೆಯ 1200 ಸೀಕೆ ವಿದೇಶಿ ಮದ್ಯವನ್ನು ಒಂದು ಅರಬ್ಬೀ ದೋಣಿಯಿಂದ ವಶ ವಶಪಡಿಸಿಕೊಳ್ಳಲಾಯಿತು — ಅವುಗಳನ್ನು ಸಾಗಿಸಲು ಸಿದ್ಧವಾಗಿದ್ದ 4 ಕಾರುಗಳನ್ನು ವಶಪಡಿಸಿಕೊಂಡು 6 ಮಂದಿಯನ್ನು ದಸ್ತಗಿರಿ ಮಾಡಲಾಯಿತು.

★

3 ಮಂದಿ ಭಾರತೀಯರಿಗೆ ಜೈಲು

ಟ್ಯೂರೆಂಟೊ— ಇಲ್ಲಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 1200 ಪೌಂಟು ಅಮೆರಿಕಾ ಡಾಲರುಗಳನ್ನು ಹೊಂದಿದ್ದ 3 ಮಂದಿ ಭಾರತೀಯರನ್ನು ಜೈಲಿಗೆ ಕಳುಹಿಸಲಾಯಿತು.

●

ಸಂಸ್ಕೃತ

ನವದೆಹಲಿ— ಸಂಸ್ಕೃತ ಬೋಧನೆಯಲ್ಲಿ ನವೀನತೆ ಮತ್ತು ಆ ಭಾಷಾ ಪ್ರಚಾರ ಮತ್ತು ಅಭಿವೃದ್ಧಿ ಬಗ್ಗೆ ಕೇಂದ್ರ ವಿದ್ಯಾ ಸಚಿವಾಲಯವು ಹೊಸ ಸ್ಕೀಂಗಳನ್ನು ತಯಾರಿಸಿದೆ

★

ದಿವ್ಯವಾಣಿ

ಮಾನವನ ಎಲ್ಲಾ ಬಗೆಯ ಕನಸುಗಳಿಗೂ ಸ್ಫೂರ್ತಿಯಿತ್ತ ದೇಶವೊಂದು ಇರುವುದಾದರೆ, ಅದು ಭಾರತವು — ರೊಮೇರೋಲ್ಯಾ

ಬೆತ್ತಲೆ ಸಾಕ್ಷಿ

ಜಗದಲ್ಪುರ (ಮಧ್ಯಪ್ರದೇಶ) — ಸ್ಥಳೀಯ ನ್ಯಾಯಾಸ್ಥಾನಕ್ಕೆ ಫಿರ್ಯಾದಿ ಪರ ಸಾಕ್ಷ್ಯ ನೀಡಲು ತೆಲ್ಲಾಮಿ ಬೋಂಗಿ ಎಂಬ 40 ವರ್ಷದ ಹಳ್ಳಿಗನು ಬೆತ್ತಲೆಯಾಗಿ ಬಂದಿದ್ದನು — ಅಡ್ವೊಕೇಟರೊಬರು ಬಟ್ಟೆ ಕೊಡಲು ಅದನ್ನು ತಿರಸ್ಕರಿಸಿದನು — ಬೆತ್ತಲೆಯಾಗಿಯೆ ಸಾಕ್ಷ್ಯ ನುಡಿದು ಯಾವ ಸಾವಧಾನವಲ್ಲದೆ ಹೊರಟು ಹೋದನು.

●

ಭಾರಿ ವಜ್ರ

ಫ್ರೀಟೌನ್— 968 9 ಕ್ಯಾರೆಟ್ ನ ಕೋಳಿ ಮೊಟ್ಟೆ ಆಕಾರದ ಅರ್ಧ ಪೌಂಡು ತೂಕದ ಇಲಿಸಿಕ್ಕಿದ, 3 ನೇ ಅತಿ ದೊಡ್ಡ ವಜ್ರವಾದ ಸಿಯರಾಲ್ಯೋನೆ ನಕ್ಷತ್ರವೆಂಬ ವಜ್ರವನ್ನು ಸರಕಾರ ಒಂದು ಅಮೆರಿಕಾ ವಾಣಿಜ್ಯ ಸಂಸ್ಥೆಗೆ ಮಾರಿತು — ರಕ್ಷಣಾ ಕಾರಣಕ್ಕಾಗಿ ಬೆಲೆಯನ್ನು ಪ್ರಕಟಿಸಿಲ್ಲ ; ಸರಕಾರ ಅದಕ್ಕೆ 1 ಮಿಲಿಯ ಪೌಂಡು ಬೆಲೆ ಕಟ್ಟಿತ್ತು.

●

ಲಂಚಕೋರರು

ಬೆಂಗಳೂರು— ಬೆಳಗಾಂನಲ್ಲಿ ತಾಲ್ಲೂಕು ಕಚೇರಿಯಲ್ಲಿ ಒಬ್ಬ ಗುಮಾಸ್ತನು ರೂ. 100 ಲಂಚ ಸ್ವೀಕರಿಸುತ್ತಿದ್ದಾಗ ಸಿಕ್ಕಿಬಿದ್ದನು — ಹೊನ್ನಾವರದಲ್ಲಿ ಒಬ್ಬ ಎಕ್ಸೈಜ್ ಸಬ್‌ಇನ್ಸ್‌ಪೆಕ್ಟರು ರೂ 25 ಲಂಚ ಸ್ವೀಕರಿಸಿದ್ದಾಗ ಸಿಕ್ಕಿಬಿದ್ದನು.

★

ಸುಪ್ರೀಂ ಕೋರ್ಟಿನಲ್ಲಿ

ನವದೆಹಲಿ— ಹಕ್ಕುಬಾಧ್ಯತಾ ಅರ್ಜಿಗಳ ವಿಚಾರಣೆಯು ಅಕ್ಟೋಬರು 30 ರಿಂದ ಪ್ರಾರಂಭವಾಗುವುದು.

ಅಸ್ಸಾಂ ಬಂದ್

ಗೌಹತಿ— ವಿಶ್ವವಿದ್ಯಾನಿಲಯಗಳ ಶಿಕ್ಷಣ ಮಾಧ್ಯಮ ಬಗ್ಗೆಯ ಜಿಜ್ಞಾಸೆ ಪ್ರತಿಭಟಿಸಿ, ವಿದ್ಯಾರ್ಥಿ ಸಂಘದ ಕರೆಯಂತೆ ಗುರುವಾರ ಅಸ್ಸಾಂ ಬಂದ್ ಯಶಸ್ವಿಯಾಗಿ ನಡೆಯಿತು — ಕೆಲಸಕಾರ್ಯಗಳೆಲ್ಲಾ ಕುಂಠಿತಗಾಗಿತ್ತು.

★

ರಾಮಾಯಣ ಸಮ್ಮೇಳನ

ತ್ರಿವೇಂದ್ರಂ— ಶ್ರೀ ರಾಮಭಕ್ತ ಸಭೆಯ ಆಶ್ರಯದಲ್ಲಿ ಡಿಸೆಂಬರು 9 ರಿಂದ 5 ದಿವಸಗಳು ಅಖಿಲ ಭಾರತ ರಾಮಾಯಣ ಸಮ್ಮೇಳನ ನಡೆಯಲಿದೆ - ಜಮ್ಮು, ಪೈಂಜ್ ರವರೂ ಸೇರಿ 50 ಮಂದಿ ವಿದ್ವಾಂಸರು ಭಾಗವಹಿಸಲಿರುವರು.

★

ಸುದ್ದಿಯ ಮೂಲ ತಿಳಿಸದಿದ್ದಕ್ಕೆ ಶಿಕ್ಷೆ

ನ್ಯೂಆರ್ಕ್ (ನ್ಯೂಜರ್ಸಿ)— ತಾನು ಕೊಟ್ಟ ಸುದ್ದಿಯ ಮೂಲ ತಿಳಿಸಲು ತಿರಸ್ಕರಿಸಿದ ವರದಿಗಾರ ಪ್ರೀಟರ್ ಬ್ರಡ್ಸ್‌ಗೆ ಅನಿರ್ದಿಷ್ಟ ಕಾಲ ಜೈಲುವಾಸ ವಿಧಿಸಲಾಯಿತು.

●

ಶಿಕ್ಷಣ ಮಾಧ್ಯಮ

ಬೆಂಗಳೂರು— ತಾಂತ್ರಿಕ ಶಿಕ್ಷಣವೂ ಸೇರಿ ವಿದ್ಯಾಭ್ಯಾಸವು ಮಾತೃಭಾಷೆಯಲ್ಲೇ ಇರಬೇಕೆಂದು, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ ಜವರೇಗೌಡರು, ವಿಜಯ ಸಂಜೆ ಕಾಲೇಜನ್ನು ಉದ್ಘಾಟಿಸುತ್ತಾ ಹೇಳಿದರು

★

ಮಹಿಳಾ ಸಂಘದ ಬೆಂಬಲ

ಮೈಸೂರು— ಅಖಿಲ ಭಾರತ ಮಹಿಳಾ ಸಂಘವು ಕಮ್ಯೂನಿಸ್ಟ್ ಪಾರ್ಟಿಯ ಬೆಲೆ ಏರಿಕೆ ವಿರುದ್ಧದ ಚಳವಳಿಗೆ ಬೆಂಬಲ ನೀಡಿದೆ.

ಆತ್ಮನಿವೇದನೆ

ಕಾಯಿ ಕರ್ಪೂರವೇಕೆ ನೈವೇದ್ಯವೇಕೆ
ನಿಜ ದೇವ ದರುಶನಕೆ ದೇಗುಲವು ಬೇಕೆ ?

ಒಂಬತ್ತು ಬಾಗಿಲದ ದೇಗುಲವು ನೋಡು
ಕೋಟಿಗಟ್ಟಲೆ ಅದರ ಕಿಂಡಿಗಳ ನೋಡು
ದಯವೆಂಬ ದೇವರನು ದೇಗುಲದಿ ನೋಡು
ನಿರ್ಮಲದಿ ನಿಶ್ಚಯದಿ ಪೂಜೆಯನು ಮಾಡು ॥ 1 ॥

ಮನವೆಂಬ ಮಂದಿರದಿ ತನುವೀಣೆ ಮಾಡು
ನರನಾಡಿಗಳನದರ ತಂತಿಯನು ಮಾಡು
ಭಕುತಿ ಬೆರಳನು ವಿಾಟಿ ನಾದದಲೆ ತೀಡು
ನಾದದಲೆಗೊಂದೊಂದು ಶಿವ ಗೀತೆ ಹಾಡು ॥ 2 ॥

ಹೊಲಸಾದ ದೇಹವನು ಹೊಲನಾಗಿ ಮಾಡು
ನಿಯಮ ನಿಷ್ಠೆಯ ಧರ್ಮ ನೇಗಿಲನು ಹೂಡು
ಭಕ್ತಿ – ಜ್ಞಾನಗಳೆಂಬ ಜೋಡೆತ್ತು ಹೂಡು
ಅರಿಷಡ್ವರ್ಗಳ ಹರಿದು ಹಸನವ ಮಾಡು ॥ 3 ॥

(ವಿಶ್ವಕಲ್ಯಾಣ) ಬಸವರಾಜ ಹಡಪದ (ಸಗರು)

ವುಡ್‌ಲಾಂಡ್ಸ್ 6-10-72 ರಿಂದ ಅಮೋಘ 2 ನೇ ವಾರ

ರಾಜೇಂದ್ರ ಕುಮಾರ್ ಆರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ
ಸಂಗೀತ : ಆರ್. ಡಿ. ಬರ್ಮನ್
ದಿನ 3 ಪ್ರದರ್ಶನಗಳು

ಅಪೆರಾ 6 10 72 ರಿಂದ

ಅಮೋಘ ತೆಲುಗು ಚಿತ್ರ

ಇನ್‌ಸ್ಪೆಕ್ಟರ್ ಭಾರ್ಯ

ಪಾತ್ರ : ಕೃಷ್ಣ, ಜ್ಯೋತಿಲಕ್ಷ್ಮಿ, ಚಂದ್ರಕಲ
ಪ್ರತಿ ದಿನ 3 ಪ್ರದರ್ಶನಗಳು

ಗೋವಧೆ ನಿಶ್ಶೇಧವಾಗಲಿ

ದಸರಾ ಸಾಂಸ್ಕೃತಿಕ ಉತ್ಸವ
1972

ಮೈಸೂರು ರಾಜ್ಯದ ಕೈಗಾರಿಕಾ ಮಂತ್ರಿಯವರಾದ ಶ್ರೀ ಎಸ್. ಎಂ. ಕೃಷ್ಣ ಅವರು
ಮೈಸೂರು ಕ್ರಾಫರ್ಡ್ ಹಾಲ್‌ನಲ್ಲಿ
8 10 72 ನೇ ಭಾನುವಾರ ಸಂಜೆ 6 ಗಂಟೆಗೆ ದಸರಾ ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸುವರು
ಮಿನುಗುತಾರೆ ಶ್ರೀಮತಿ ಕಲನ ಕೃಪೆಯಿಟ್ಟು ಅಧ್ಯಕ್ಷತೆ ವಹಿಸುವರು
ಪ್ರಖ್ಯಾತ ಚಿತ್ರ ಕಲಾವಿದೆ ಕುಮಾರಿ ಹೇಮಾ ಮಾಲಿನಿ
ಅವರಿಂದ ಭರತನಾಟ್ಯ

ಟಿಕೆಟ್ ದರ : ರೂ. 25, 15, 10 ಮತ್ತು 5
ಟಿಕೆಟ್ ದೊರೆಯುವ ಸ್ಥಳ : 1. ಕ್ರಾಫರ್ಡ್ ಹಾಲ್ 2. ಹೊಟೇಲ್ ಮೆಟ್ರೋಪೋಲ್ 3 ಹೊಟೇಲ್ ವಾಸಪ್ರಕಾಶ್ 4. ಇಂದ್ರ ಭವನ್ ಮತ್ತು 5. ವಾರ್ತಾ ಮತ್ತು ಪ್ರವಾಸೋದ್ಯಮ ಅಸಿಸ್ಟೆಂಟ್ ಡೈರೆಕ್ಟರ್‌ರವರ ಕಚೇರಿ, ವಸ್ತುಪ್ರದರ್ಶನ ಕಟ್ಟಡ, ಮೈಸೂರು. [ಫೋ. : 23251]

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಿತ್ರೋತ್ಸವದ ಉಪ ಸಮಿತಿ
ಅಧ್ಯಕ್ಷರಿಂದ ಪ್ರಕಟಿತ

SHAKTI
SUDHA

A Superb Tonic

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಉದೇಶ ಹೊಸ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ
ಆನೆ – ಹುಡುಗ

Edited Printedand Published by Dharmapracharanirata
M S Krishna Rao (Propretor) at the Satyavad. Press
Chamarajapuram Mysore

Quality Printing Neat Binding
Lakshminarasimha Press
Sivarampet, Mysore

Contribute Liberally to the National Defence Fund